**‘ಅಳಗಿರಿ ಚೆಟ್ಟಿಯಾರರು ತಿರುಮೊಳಿಯನ್ನು ಕರೆಸಿ, ‘ನಿನ್ನ ಗಂಡನಿಗೆ ಗುಹ್ಯ ರೋಗವಿದೆ. ಇದೀಗ ಜೈಲು ಸೇರುತ್ತಿದ್ದಾನೆ, ಅಂಥವನಿಂದ ಕಂಪನಿಗೆ ಲಾಭವಿಲ್ಲ. ಇಕಾ ಒಂದು ತಿಂಗಳ ಬಿಟ್ಟಿ ಸಂಬಳ. ಅದೋ ಅಲ್ಲಿ ಲಾರಿಯ ಕ್ಯಾಬೀನಿನಲ್ಲಿ ನಿನ್ನ ಗಂಡ ಇಟ್ಟುಕೊಂಡಿದ್ದ ಪೆಟ್ಟಿಗೆ ಇದೆ. ಕೊಂಡು ಪೋ’ ಅಂದರು.**

ಮುಖ ಮೂತಿಯನ್ನೆಲ್ಲ ನಡುನಡುವೆ ಅಲ್ಲಾಡಿಸುತ್ತಲಿದ್ದ ಸಿಂಗನಾದನ ಭೋಜನವೂ ಆಗುತ್ತಿತ್ತು. ಕೊಂಗುವಿಗೆ ಮಾತ್ರ ಅವನಾಡುತ್ತಿದ್ದ ಮಾತಿನಂತೆ ತಿನ್ನುವ ಉಪಾಹಾರವೂ ನಿಧಾನ. ಮಾತಾಡುವಲ್ಲಿ ಬಾಯಿಂದ ಜೊಲ್ಲು ಸುರಿಯುತ್ತಿದ್ದಂತೆ ಉಣ್ಣುವಾಗಲೂ ಪದಾರ್ಥದ ಚೂರು ಉದುರುತ್ತಿತ್ತು.

ಅರಳಿಮರದ ದಿಣ್ಣೆಯ ಮೇಲೆ ರಾತ್ರಿ ಮಾಡುತ್ತಲೂ, ಹಗಲು ಹೆಣ ಸುಡುತ್ತಲೂ, ಹೂಳುತ್ತಲೂ ಇದ್ದ ಕೊಂಗುನಾದನಿಗೆ ಅವನು ಪುರುಷಕಾರಿಯೇ ಅಲ್ಲವೆಂದು ಯಾರೂ ಹೆಣ್ಣು ಕೊಡಲೇ ಇಲ್ಲ. ಅವನಿಗೂ ಗಂಡಸರಾದವರು ಕಲ್ಯಾಣವಾಗುವರೆಂಬ ವಿಷಯ ಅಷ್ಟಾಗಿ ಗೊತ್ತಿರಲಿಲ್ಲ.

ಹಗಲು ಹೆಣ ಹೂತವರು ಹೋದ ಮೇಲೆ, ಒಂದು ವೇಳೆ ಊರಲ್ಲಿ ತಂಗಿದ್ದರೆ ತಂಗಮಣಿಯೂ, ಕೊಂಗುವೂ ರಾತ್ರಿ ಸರುಹೊತ್ತಿನ ಮೇಲೆ ಸತ್ತವನ ಸಮಾಧಿಯ ಮುಂದೆ ಕೂತು ತಂಗಮಣಿ, ‘ಎಲೈ ಮುಕ್ತಿ ಕಂಡ ಆತ್ಮವೇ ಸ್ವಸ್ಥವಾಗಿರು, ದೇವರನ್ನು ಸೇರು’ ಎಂಬಂತೆ ಮಣ್ಣಿನ ಗುಡ್ಡೆಯ ಮೇಲೆ ಹಸ್ತವಿಟ್ಟು ಅದೇ ಹಸ್ತವನ್ನು ಹಣೆಗೆ ಮುಟ್ಟಿಸಿದರೆ ಕೊಂಗುನಾದನೂ ಅದನ್ನೇ ಅನುಸರಿಸುತ್ತಿದ್ದ. ಇತ್ತ ಇವರಿಬ್ಬರ ಬಳಿ ಸಿಂಗನಾದನೂ ಆರಾಮದಿಂದ ಕಾಲು, ಮೈ, ತಲೆ ಬಾಚಿ ಸತ್ತವರಿಗೆ ತಾನೂ ದುಃಖ ಸೂಚಿಸುವಂತೆ ಕಣ್ಣು ಮುಚ್ಚಿರುತ್ತಿತ್ತು.

ಹೆಣವು ಬಾರದ ದಿನದಲ್ಲಿ ಕೊಂಗುವಿಗೆ ಸ್ಮಶಾನವೆಲ್ಲ ಗುಡಿಸುವುದು, ಹೆಣ ಸುಟ್ಟು ಅತ್ತಲಿತ್ತ ಹೊರಳಿದ ತುಂಡು ಸೌದೆ ಒಟ್ಟು ಮಾಡುವ ಕೆಲಸ. ಹೀಗಿದ್ದ ಕೊಂಗುನಾದ ಇದ್ದಕ್ಕಿದ್ದಂತೆಯೇ ಪೊಲೀಸ್ ಸ್ಟೇಷನ್ನಿಗೆ ಹೋಗಬೇಕಾಗಿ ಬಂತು!

ಒಂದು ದಿನ ಹೆಣ ಹೂತವರು ಮೂರನೇ ದಿನದಲ್ಲಿ ಎಡೆ ಹಾಕಲು ಬಂದು ನೋಡಿದರೆ ಮುಚ್ಚಿದ ಗುಂಡಿಯ ಸಮಾಧಿ ಮಣ್ಣು ಮೇಲೆದ್ದಿದೆ, ಹೆಣವೂ ಇಲ್ಲ! ಈ ಸಮಾಚಾರವು ಪೊಲೀಸ್ ಸ್ಟೇಷನ್ ತಲುಪುತ್ತ, ಸತ್ತ ಮನೆಯವರಿಗೆ ಶೋಕಕ್ಕಿಂತ ಸಿಟ್ಟು, ಸಿಟ್ಟಿಗಿಂತ ಶೋಕವೂ ಅಧಿಕವೆನಿಸಿಬಿಟ್ಟಿತು.

ಹೂತ ಹೆಣವನ್ನು ಯಾರು ತಾನೇ ಎತ್ತುವರು. ಈ ಕುಕೃತ್ಯವು ಸ್ಮಶಾನವಾಸಿ ಕೊಂಗನದೇ ಇರಬೇಕೆಂದು ಪೊಲೀಸರು ಅವನನ್ನು ಹಿಡಿದು, ‘ಹೆಣಾ ತಿನ್ನುವುದಕ್ಕೆ ನೀ ಎನ್ನಡಾ ಹಿಡಿಂಪನಾ, ಪಕಾಸುರನಡಾ’ ಎಂದು ಜೀಪಿಗೆ ಏರಿಸಿ ಸ್ಟೇಷನ್ನಿಗೆ ಎಳೆದೊಯ್ದರು. ಇತ್ತ ಸಿಂಗನಾದನು ಹೆಣ ಎತ್ತಿದವರನ್ನು ನಾನು ಕಂಡಿರುವೆನೆಂಬಂತೆ ಆಕಾಶಕ್ಕೆ ಮುಖವೆತ್ತಿ ಬೊಗಳುತ್ತ ಜೀಪಿನ ಹಿಂದೆಯೇ ಓಡತೊಡಗಿತು.

ಸ್ಟೇಷನ್ನಿನಲ್ಲಿ ಪೊಲೀಸರು ಕೇಳಿದ ಪ್ರಶ್ನೆಗಳಿಗೆಲ್ಲಾ ಕೊಂಗುನಾದನಿಗೆ ಹೌದೆನ್ನಬೇಕೋ ಇಲ್ಲವೆನ್ನಬೇಕೋ ಗೊತ್ತೇ ಆಗಲಿಲ್ಲ. ಕಟಬಾಯಲ್ಲಿ ಜೊಲ್ಲು ಸುರಿಸುತ್ತ ಒಂದೊಂದು ಮಿನಿಟಿಗೆ ಒಂದೊಂದು ಮಾತಾಡಿದ. ಅವನ ತೊದಲಾಟವನ್ನು ಕೇಳಿದ ಒಬ್ಬ ಪೊಲೀಸು, ‘ಅಡಡಾ ಇವ್ನೇ ಸಿನಿಮಾವಿಲೆ ಪೆರಿಯ ಆಕ್ಟರ್ ಮಾದರಿ ನಡಿಪ್ಪಾ’ ಎಂದು ನಗೆಯಾಡಿದ. ಚೆಡ್ಡಿ ಮಾತ್ರದಲ್ಲಿದ್ದ